# ದುಡ್ಡು ದೊಡ್ಡದಪ್ಪ..!

## ಪ್ರಶ್ನೋತ್ತರ

**ಸಿ ಎಸ್ ಸುಧೀರ್,** ಸಿಇಒ- ಸಂಸ್ಥಾಪಕರು
ಇಂಡಿಯನ್ ಮನಿ.ಕಾಂ



ಬ್ಯಾಂಕಿಂಗ್, ಹೂಡಿಕೆ, ಉಳಿತಾಯ, ಗಳಿಕೆ, ಸಾಲ, ವಿಮೆ ಹೀಗೆ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ನೀವೂ ಕಳುಹಿಸಬಹುದು.
ಪ್ರಶ್ನೆ ಕಳುಹಿಸಬೇಕಾದ ಇ– ಮೇಲ್ ವಿಳಾಸ sudheer@indianMoney.com

## ಧಮ್ ಎಳೆದ್ರೆ ದುಬಾರಿಯಾಗುತ್ತೆ ಟರ್ಮ್ ಇನ್ಶೂರೆನ್ಸ್..!

**1. ಹೆಸರು ಬೇಡ. 18 ವರ್ಷ ವಯಸ್ಸಿನ ನಾನು ಬೆಂಗಳೂರಿನ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಇತ್ತೀಚೆಗೆ ನಾನು 1 ಕೋಟಿ ಮೊತ್ತದ ಟರ್ಮ್ ಲೈಫ್ ಇನ್ಶೂರೆನ್ಸ್ ಪಾಲಿಸಿ ಮಾಡಿಸಲು ಹೋಗಿದ್ದೆ. ಆಗ ಆ ಕಂಪೆನಿಯವರು ಧೂಮಪಾನ ಮಾಡುತ್ತೀರಾ ಎಂದು ಕೇಳಿದರು. ಹೌದು ಎಂದೆ. ಧೂಮಪಾನ ಮಾಡಿದರೆ ಟರ್ಮ್ ಲೈಫ್ ಇನ್ಶೂರೆನ್ಸ್‌ನ ವಾರ್ಷಿಕ ಪ್ರೀಮಿಯಂ 17,764 ರೂ ಆಗುತ್ತದೆ. ಧೂಮಪಾನ ಮಾಡದಿದ್ದರೆ ಪ್ರೀಮಿಯಂ 11,530 ರೂ ಆಗಲಿದೆ ಎಂದರು. ಅದೇಕೆ ಈ ನಿಯಮ ಮಾಡಲಾಗಿದೆ ವಿವರಿಸಿ.**

ನೀವು ಧೂಮಪಾನ ಮಾಡಿದಾಗ ನಿಮ್ಮ ಆರೋಗ್ಯ ಹದಗೆಟ್ಟು ಕೆಟ್ಟ ಕಾಯಿಲೆಗಳು ನಿಮ್ಮನ್ನು ಕಾಡಿ ಜೀವಕ್ಕೆ ಕುತ್ತು ತರಬಹುದು. ಧೂಮಪಾನ ಮಾಡದಿದ್ದಾಗ ನಿಮ್ಮ ಆರೋಗ್ಯದ ಸ್ಥಿತಿ ಉತ್ತಮವಾಗಿರುತ್ತದೆ. ಅಲ್ಲದೆ ಧೂಮಪಾನವಿಲ್ಲದೆ ಉತ್ತಮ ಜೀವನಶೈಲಿ ಇದ್ದಾಗ ಮನುಷ್ಯನ ಜೀವಿತಾವಧಿ ಹೆಚ್ಚಾಗುತ್ತದೆ. ಈ ಅಂಶವನ್ನು ಗಣನೆಗೆ ತೆಗೆದುಕೊಂಡು ಇನ್ಶೂರೆನ್ಸ್ ಕಂಪೆನಿಗಳು ಟರ್ಮ್ ಲೈಫ್ ಇನ್ಶೂರೆನ್ಸ್ ಪಾಲಿಸಿ ನೀಡುವಾಗ ಧೂಮಪಾನ ಮಾಡುವವರಿಂದ ಹೆಚ್ಚಿಗೆ ಪ್ರೀಮಿಯಂ ಕಟ್ಟಿಸಿಕೊಳ್ಳುತ್ತವೆ. ಧೂಮಪಾನ ತ್ಯಜಿಸಿದಾಗ ನಿಮ್ಮ ಆರೋಗ್ಯ ಚೆನ್ನಾಗಿರುವ ಜತೆಗೆ ಇನ್ಶೂರೆನ್ಸ್ ಹಣದಲ್ಲೂ ಕಡಿತವಾಗುತ್ತದೆ ಎನ್ನುವಾಗ ನೀವೇಕೆ ಇದರ ಬಗ್ಗೆ ಯೋಚಿಸಬಾರದು? ಧೂಮಪಾನ ಮಾಡದಿದ್ದಾಗ ಟರ್ಮ್ ಲೈಫ್ ಇನ್ಶೂರೆನ್ಸ್ ಮಾಡಿಸಿದರೆ ಎಷ್ಟು ಹಣ ಉಳಿತಾಯವಾಗುತ್ತದೆ ಎನ್ನುವುದನ್ನು ಕೆಳಗಿನ ಪಟ್ಟಿಯಲ್ಲಿ ವಿವರಿಸುತ್ತೇನೆ ನೋಡಿ.

**ಧಮ್ ಎಳೆದ್ರೆ ದುಬಾರಿಯಾಗುತ್ತೆ ಟರ್ಮ್ ಇನ್ಶೂರೆನ್ಸ್...!**

| ವಯಸ್ಸು | ಟರ್ಮ್ ಇನ್ಶೂರೆನ್ಸ್ ಮೊತ್ತ | ಸಾಮಾನ್ಯ ವಾರ್ಷಿಕ ಪ್ರೀಮಿಯಂ | ಧೂಮಪಾನ ಮಾಡುವವರಿಗೆ ವಾರ್ಷಿಕ ಪ್ರೀಮಿಯಂ | ಧೂಮಪಾನ ಮಾಡದಿದ್ದರೆ ಉಳಿಯುವ ಹಣ |
|---|---|---|---|---|
| 25 | 1 ಕೋಟಿ | ರೂ. 10,635 | ರೂ.16,161 | ರೂ.5,526 |
| 28 | 1 ಕೋಟಿ | ರೂ. 11,530 | ರೂ.17,764 | ರೂ.6,234 |
| 32 | 1 ಕೋಟಿ | ರೂ. 13,263 | ರೂ.20,667 | ರೂ.7,414 |
| 37 | 1 ಕೋಟಿ | ರೂ. 16,444 | ರೂ.25,957 | ರೂ.9,513 |
| 40 | 1 ಕೋಟಿ | ರೂ. 19,056 | ರೂ.30,375 | ರೂ.11,319 |

**ಸೂಚನೆ : ಇದು ಅಂದಾಜು ಪಟ್ಟಿ. ಕಂಪೆನಿಗಳಿಗೆ ಅನುಗುಣವಾಗಿ ಪ್ರೀಮಿಯಂನಲ್ಲಿ ವ್ಯತ್ಯಾಸವಾಗುತ್ತದೆ.**

**2. ನಾನು ಹುಬ್ಬಳ್ಳಿ ನಿವಾಸಿ ಪ್ರವೀಣ ಹಿರೇಮಠ್. ಇತ್ತೀಚೆಗಷ್ಟೇ ಉದ್ಯೋಗಕ್ಕೆ ಸೇರಿದ್ದು ಐಟಿ ರಿಟರ್ನ್ಸ್ ಸಲ್ಲಿಸಬೇಕು. ಆದಾಯ ತೆರಿಗೆಯಲ್ಲಿ 80 ಸಿ ಎಂದರೇನು..? ಈ ಸೆಕ್ಷನ್‌ನಿಂದ ನನಗಾಗುವ ಅನುಕೂಲವೇನು ತಿಳಿಸಿ.**

ಪ್ರವೀಣ್ ಹಿರೇಮಠ್ ಅವರೇ ನೀವು ಕೇಳಿರುವ ಪ್ರಶ್ನೆಯಿಂದ ಹಲವರಿಗೆ ಉಪಯೋಗವಾಗಲಿದೆ ಎಂದು ನಾನು ಭಾವಿಸಿದ್ದೇನೆ. ಆದಾಯ ತೆರಿಗೆಯ ಸೆಕ್ಷನ್ 80 ಸಿ ಮೂಲಕ ನಿಮ್ಮ ಒಟ್ಟು ತೆರಿಗೆ ಆದಾಯದಲ್ಲಿ 1 ಲಕ್ಷದ 50 ಸಾವಿರ ರೂಪಾಯಿ ಹಣವನ್ನು ತೆರಿಗೆ ರಹಿತವನ್ನಾಗಿ ಮಾಡಿಕೊಳ್ಳಬಹುದು. ಈ ವಿನಾಯಿತಿಯು ತೆರಿಗೆ ಪಾವತಿಸುವ ವ್ಯಕ್ತಿ ಅಥವಾ ಎಚ್ ಯು ಎಫ್ ಗೆ (ಹಿಂದೂ ಅವಿಭಕ್ತ ಕುಟುಂಬ) ಅನ್ವಯಿಸುತ್ತದೆ. ನೀವು ಎಲ್ಐಸಿ, ಪಿಪಿಎಫ್, ಮಕ್ಕಳ ಶಿಕ್ಷಣ ವೆಚ್ಚಗಳು, ಹೆಲ್ತ್ ಇನ್ಶೂರೆನ್ಸ್‌ಗಳಲ್ಲಿ ಹೂಡಿಕೆ ಮಾಡಿ ತೆರಿಗೆ ವಿನಾಯಿತಿ ಪಡೆಯಬಹುದು. ಆದಾಯ ತೆರಿಗೆ ಇಲಾಖೆಗೆ ಐಟಿ ರಿಟರ್ನ್ಸ್ ಸಲ್ಲಿಸುವ ಮೂಲಕ ಹೆಚ್ಚುವರಿಯಾಗಿ ಕಡಿತಗೊಂಡಿರುವ ತೆರಿಗೆ ಹಣವನ್ನು ಹಿಂಪಡೆದುಕೊಳ್ಳಬಹುದು. ಎಷ್ಟೋ ಸಂದರ್ಭದಲ್ಲಿ ಸರಿಯಾದ ಮಾಹಿತಿ ಸಿಗದೆ ನೀವು ಕೆಲಸ ಮಾಡುವ ಕಂಪನಿ ಟಿಡಿಎಸ್‌ನಲ್ಲಿ ಹೆಚ್ಚುವರಿ ಹಣ ಕಡಿತ ಮಾಡಿರುತ್ತದೆ. ಇಂತಹ ಸಂದರ್ಭಗಳಲ್ಲಿ ನೀವು 80 ಸಿ ಅಡಿಯಲ್ಲಿ ಇನ್ವೆಸ್ಟ್‌ಮೆಂಟ್‌ಗಳನ್ನು ಮಾಡಿದ್ದಲ್ಲಿ ಸಾಧ್ಯವಾದಷ್ಟು ಹೆಚ್ಚಿನ ತೆರಿಗೆ ಹಣವನ್ನು ವಾಪಸ್ ಪಡೆಯಬಹುದು.

**3. ನನ್ನ ಹೆಸರು ಗಜಾನನ ಹೆಗಡೆ. ಮಂಗಳೂರಿನ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿರುವ ನಾನು ಮ್ಯೂಚುವಲ್ ಫಂಡ್‌ನಲ್ಲಿ 18 ವರ್ಷಗಳ ಕಾಲ ಹೂಡಿಕೆ ಮಾಡುವ ಮೂಲಕ ಮಗಳ ಮದುವೆಗೆ 30 ಲಕ್ಷ ರೂ ಉಳಿತಾಯ ಮಾಡಿದ್ದೇನೆ. ಜನವರಿಯಲ್ಲಿ ನನ್ನ ಮಗಳ ಮದುವೆಯಿದೆ. ಅಲ್ಲಿಯ ತನಕ ಈ ಹಣವನ್ನು ಡೆಟ್ ಫಂಡ್‌ನಲ್ಲಿ ಇಡಲು ಉದ್ದೇಶಿಸಿದ್ದೇನೆ. ಇದು ಸರಿಯಾದ ನಿರ್ಧಾರವೇ ಸಲಹೆ ನೀಡಿ.**

ಮ್ಯೂಚುವಲ್ ಫಂಡ್ ಹೂಡಿಕೆ ಧೀರ್ಘಾವಧಿಯದ್ದಾಗಿದ್ದಲ್ಲಿ ಲಾಭ ಸಿಗುತ್ತದೆ ಎನ್ನುವುದನ್ನು ನೀವು ನಿರೂಪಿಸಿದ್ದೀರಿ. ನಿಮಗೆ ಇನ್ನು ಐದಾರು ತಿಂಗಳಲ್ಲಿ ಹಣ ಬೇಕಾಗಿರುವುದರಿಂದ ಡೆಟ್ ಫಂಡ್(ಸಾಲ ನಿಧಿ) ಗಳಲ್ಲಿ ಹೂಡಿಕೆ ಮಾಡುವುದು ಅಷ್ಟು ಸೂಕ್ತ ನಿರ್ಧಾರವಲ್ಲ ಎನ್ನುವುದು ನನ್ನ ಅಭಿಪ್ರಾಯ. ಡೆಟ್ ಫಂಡ್‌ಗಳ ಕೆಲ ಮಾದರಿಯ ಹೂಡಿಕೆಯಲ್ಲಿ ರಿಸ್ಕ್ ಜಾಸ್ತಿ ಇರುತ್ತದೆ. ಡೆಟ್ ಫಂಡ್ ಮಾದರಿಗಳಾದ ಗಿಲ್ಟ್ ಫಂಡ್ ಮತ್ತು ಕ್ರೆಡಿಟ್ ರಿಸ್ಕ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಹಣಕ್ಕೆ ಭದ್ರತೆ ಕಡಿಮೆ. ನೀವು ಲಿಕ್ವಿಡ್ ಫಂಡ್ ಮತ್ತು ಅಲ್ಟ್ರಾ ಶಾರ್ಟ್ ಟರ್ಮ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಹೆಚ್ಚು ಸೂಕ್ತ ಎಂಬುದು ನನ್ನ ಸಲಹೆ. ನಿಮ್ಮ ಉಳಿತಾಯದ ಹಣವನ್ನು ಈ ಎರಡು ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ನಿಮ್ಮ ಹಣ ಹೆಚ್ಚು ಸುರಕ್ಷಿತ ಎನ್ನಬಹುದು. ನಿಮಗೆ ಹಣದ ಅಗತ್ಯವಿದೆ ಎನ್ನುವಾಗ ಅದನ್ನು ಪಡೆದುಕೊಳ್ಳಲು ಈ ಫಂಡ್ ಅವಕಾಶ ಕಲ್ಪಿಸುತ್ತದೆ. ಇದಲ್ಲದೆ ಎಫ್‌ಡಿ (ನಿಶ್ಚಿತ ಠೇವಣಿ) ಅಥವಾ ಉಳಿತಾಯ ಖಾತೆ ಮೇಲೆ ಸಿಗುವ ಬಡ್ಡಿ ದರಕ್ಕಿಂತ ಇದು ಹೆಚ್ಚು ಲಾಭ ತಂದುಕೊಡುವ ಸಾಧ್ಯತೆ ಇರುವುದರಿಂದ ಲಿಕ್ವಿಡ್ ಫಂಡ್ ಮತ್ತು ಅಲ್ಟ್ರಾ ಶಾರ್ಟ್ ಟರ್ಮ್ ಫಂಡ್‌ಗಳಲ್ಲಿ ಹೂಡಿಕೆ ಸರಿಯಾದ ಕ್ರಮ ಎಂದು ವಿಶ್ಲೇಷಿಸಬಹುದು.

ಉಚಿತ ಆರ್ಥಿಕ ಸಲಹೆಗಾಗಿ ಮಿಸ್ ಕಾಲ್ ಕೊಡಿ
022 6181 6111

IndianMoney.com
Be Wise, Get Rich